ವಾಸನೆಯ ತನ್ನ ಸೆರಗಿನಿಂದ ಒರೆಸುವುದು, ಪ್ರಶ್ನೆ ಕೇಳಿದವರ ಪಾಲಿಗೆ ನಿರೀಕ್ಷಿತ ದೃಶ್ಯ. ಆ ಕ್ಷಣಕ್ಕೆ ಕಣ್ಣೀರು ಬರಲಿಲ್ಲವೆಂದ ಮಾತ್ರಕ್ಕೆ, ಕರಿಯಕ್ಕನಿಗೆ ಮಗಳ ಬಗ್ಗೆ ಚಿಂತೆಯಿಲ್ಲ ಎಂದಲ್ಲ. ಎಂಟು ವರ್ಷಗಳ ಹಿಂದೆ, ಮೀನು ಹಿಡಿಯಲು ಹೋದ ಗಂಡ ಚನಿಯ ಕಡಲಲ್ಲೇ ಕರಗಿ ಹೋದ ಮೇಲೆ, ಅವಳು ಒಂಟಿಯಾಗಿ ಎರಡು ಮಕ್ಕಳನ್ನು ಸಾಕಿ ಬೆಳೆಸಲು ಜೀವ ಸವೆಸಿದ್ದು ಗೊತ್ತಿಲ್ಲದವರಿಲ್ಲ. ಅವಳ ಕಷ್ಟವನ್ನು ಕಂಡಿದ್ದವರು ತಮ್ಮ ಪರಿಚಯದಲ್ಲಿ ಗಂಡಿದ್ದರೆ, ಕರಿಯಕ್ಕನಿಗೆ ಮಾಹಿತಿ ನೀಡುವುದುಂಟು. ಆದರೂ ನಾಗಕ್ಕನಿಗೆ ಕಂಕಣ ಬಲ ಕೂಡಿ ಬಂದಿರಲಿಲ್ಲ. ಅದಕ್ಕೆ ಕಾರಣ, ಕರಿಯಕ್ಕನ ಜೋರು ಬಾಯಿಯೇ ಹೊರತು, ನಾಗಕ್ಕಳಲ್ಲಂತೂ ಯಾವ ಐಬೂ ಇರಲಿಲ್ಲ. ಕರಿಯಕ್ಕನ ಕುಟುಂಬದಲ್ಲಿ ಯಾರಿಗೂ ಇಲ್ಲದಂತಹ ಚೆಲುವು ನಾಗಕ್ಕನದು. ಇಪ್ಪತ್ತೈದರ ಹರೆಯದ ಅವಳ ದೇಹದಲ್ಲಿ ಪುಟಿಯುತ್ತಿದ್ದ ಯೌವನ, ಓರಗೆಯ ಹುಡುಗರಲ್ಲಿ ಮಾತ್ರವಲ್ಲ, ಮದುವೆಯಾದ ಗಂಡಸರ ಮನದಲ್ಲಿ ಕೂಡ ಕಾಮನಬಿಲ್ಲು ಮೂಡಿಸುತ್ತಿತ್ತು. ಆದರೆ, ನಿಧಿಯನ್ನು ಕಾಯುವ ಕಾಳ ಸರ್ಪದಂತಿರುವ ಕರಿಯಕ್ಕನಿಗೆ ಹೆದರಿ ಯಾವ ಗಂಡು ಪ್ರಾಣಿಯೂ ಅವಳ ಹತ್ತಿರಕ್ಕೆ ಸುಳಿಯುವ ಸಾಹಸ ಮಾಡುತ್ತಿರಲಿಲ್ಲ. ಹರೆಯದ ಕಾಮನೆಗಳನ್ನು ಮೈತುಂಬಿಕೊಂಡಿರುವ ಅವಳಿಗೋ, ದೂರದಿಂದಲೇ ದಿಟ್ಟಿಸುವ ಹಸಿದ ಕಣ್ಣುಗಳು ತಾಯಿ ಇಲ್ಲದಿರುವ ಸಮಯದಲ್ಲಾದರೂ ಹತ್ತಿರ ಬರಬಾರದೇ ಎಂಬ ಬಯಕೆ. ಕರಿಯಕ್ಕನಿಗೂ, ಮಗಳ ಕಾಮನೆಗಳ ಅರಿವುಂಟು. ಅವಳೂ ಒಂದಾನೊಂದು ಕಾಲದಲ್ಲಿ ಇದೇ ಕಡಲ ತಡಿಯಲ್ಲಿ ರಂಗುರಂಗಿನ ಬಯಕೆಗಳ ಮರಳು ಮಂಟಪ ಕಟ್ಟಿದವಳೇ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಪಕ್ಕದ ಮನೆಯ ಪೀಟರ್ ಪರ್ಬುವಿನ ಜೊತೆ ಓಡಿಹೋಗಲು ಕಡಲ ದಡದಲ್ಲಿ ಕಾಯುತ್ತಿದ್ದ ತನ್ನನ್ನು ಅಪ್ಪ ದರದರನೆ ಎಳೆದುಕೊಂಡು ಬಂದಿದ್ದು, ಎರಡೇ ವಾರಕ್ಕೆ ಚನಿಯನಿಗೆ ಧಾರೆ ಎರೆದು ಕೊಟ್ಟದ್ದು, ನೆನೆಸಿಕೊಂಡರೆ ಈಗಲೂ ಮನಸ್ಸು ಭಾರವಾಗುತ್ತದೆ ಅವಳಿಗೆ. ಏಳೇಳು ತಲೆಮಾರಿನಿಂದಲೂ ತನ್ನ ವಂಶಜರು ಕನಸಿನಲ್ಲೂ ಕಾಣದ, ದಂತದ ಮೈಬಣ್ಣ ನಾಗುವಿಗೆ ಮಾತ್ರ ಏಕಿದೆ ಎಂಬ ರಹಸ್ಯ ತನ್ನನ್ನು ಬಿಟ್ಟರೆ ಹತ್ತು ವರ್ಷದ ಹಿಂದೆ ತಲೆ ಮೇಲೆ ತೆಂಗಿನ ಕಾಯಿ ಬಿದ್ದು ಸತ್ತ ಪೀಟರ್ ಪರ್ಬುವಿನ ಜೊತೆ ಸಮಾಧಿಯಾಗಿದೆ ಎಂದು ಕರಿಯಕ್ಕ ಬಲವಾಗಿ ನಂಬಿದ್ದಾಳೆ. ಅಸಲಿಗೆ, ಕರಿಯಕ್ಕನೆಂಬ ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದ ಸಂಗತಿ ಅವಳ ಸರೀಕರಲ್ಲಿ ಬಹಳಷ್ಟು ಮಂದಿಗೆ ಗೊತ್ತಿದ್ದರೂ, ಕರಿಯಕ್ಕನ ಬಾಯಿಗೆ ಬೀಳುವುದೂ ಒಂದೇ, ಕಲ್ಲು ಕಟ್ಟಿಕೊಂಡು ಕಡಲಿಗೆ ಬೀಳುವುದೂ ಒಂದೇ ಎಂದು ಹೆದರಿ ಸುಮ್ಮನಿದ್ದಾರೆ. ಗುಣದಲ್ಲಿ ತನ್ನ ತದ್ರೂಪದಂತಿರುವ ನಾಗು ತನ್ನ ಸರ್ಪಗಾವಲನ್ನು ದಾಟುವ ಮೊದಲೇ ಮದುವೆ ಮಾಡಿಸುವ ಅವಸರ ಕರಿಯಕ್ಕನಿಗೆ.

ಬಾಯಿ ತೆಗೆದರೆ ಮಗಳ ಮದುವೆಯ ಬಗ್ಗೆ ಬಡಬಡಿಸುತ್ತಿದ್ದ ಕರಿಯಕ್ಕ, ಆ ವಿಷಯದಲ್ಲಿ ಏಕ್‌ದಂ ಚುಪ್ ಆಗಿಬಿಟ್ಟಳು. ಈ ಸಂಗತಿ ಬಹುಬೇಗ ಊರಿಗೆಲ್ಲ ಸುದ್ದಿಯಾಗಿಬಿಟ್ಟಿತು. ನಾಗುವಿನ ಬಲ ತೊಡೆಯ ಮೇಲೆ ಹೆಡೆಯೆತ್ತಿದ ಸರ್ಪದಂತಿರುವ ಆಕೃತಿ ತನ್ನಷ್ಟಕ್ಕೆ ಮೂಡಿದ್ದು. ಅದರ ಕಾರಣ ಹುಡುಕಿ ಹೋದಾಗ, ಸಾನೂರಿನ ಪೂಜಾರಿಯೊಬ್ಬರು ಅವಳು ನಾಗ ಪಾತ್ರಿಯಾಗಲು ಹುಟ್ಟಿದವಳು ಎಂದು ಹೇಳಿದಷ್ಟೆ ನೆಪವಾಯಿತು. ನಾಗಕ್ಕ ನಾಗಪಾತ್ರಿಯಾದಳು. ಕರಿಯಕ್ಕನ ಮೀನಿನ ಬುಟ್ಟಿ ಅಟ್ಟ ಸೇರಿತು.

ಮೀನು ತಾರದ ಕರಿಯಕ್ಕನ ದಾರಿ ಕಾದು ಸುಸ್ತಾದ ಅಜ್ಜಿಗೆ ಆ ಕಡೆ ಬರುವ ಬೇರೆ ಮೀನುಗಾರ್ತಿಯರು ಅವಳ ಕಥೆ ಅಷ್ಟಿಷ್ಟು ಹೇಳಿದ್ದುಂಟು. ವ್ಯವಹಾರದ ನಿಮಿತ್ತ ಬೆಂಗ್ರೆ ಪೇಟೆಗೆ ಹೋಗಿ ಬರುವ ಅಜ್ಜಿಯ ಮಕ್ಕಳು, ಕರಿಯಕ್ಕನ ಮಗಳು ಪಾತ್ರಿಯಾಗಿ ದರ್ಶನ ಕೊಡುತ್ತಿರುವುದು, ಜನ ಅವಳಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಿರುವುದು ಹೇಳಿದಾಗಲೆಲ್ಲಾ ಅಜ್ಜಿ, ತಾನೂ ಯಾವತ್ತೂ